155 ನಿಯಮ 330 = (54)
LRK 1704

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಇವರ ನಿಯಮ 330ರ ಸೂಚನಾ ಪತ್ರಕ್ಕೆ ಉತ್ತರ.

### ನಿಯಮ 330ರ ಮೇರೆಗೆ ಸೂಚನೆ:-

ಕಟ್ಟಡ ಕಾರ್ಮಿಕರಿಗೆ ಟೂಲ್ ಕಿಟ್‌ಗಳನ್ನು ನೀಡಲು ಕರೆಯಲಾದ ಟೆಂಡರ್ ಪ್ರಕ್ರಿಯೆಯಲ್ಲಿ ರೂ.493 ಕೋಟಿ ಅವ್ಯವಹಾರ ನಡೆದಿರುವ ಕುರಿತು ಮತ್ತು ಕಟ್ಟಡ ಕಾರ್ಮಿಕರಿಗೆ ಟೂಲ್ ಕಿಟ್ ಸರಬರಾಜು ಮಾಡಲು ಐಟಿ ಕಂಪನಿಗೆ ಟೆಂಡರ್ ನೀಡುವ ಮೂಲಕ ನೇರವಾಗಿ ಭ್ರಷ್ಟಾಚಾರವೆಸಗಿರುವ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

### ಉತ್ತರ:-

ಕಟ್ಟಡ ಕಾರ್ಮಿಕರಿಗೆ ಟೂಲ್ ಕಿಟ್‌ಗಳನ್ನು ನೀಡಲು ಕರೆಯಲಾದ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ. ಮಂಡಳಿಯ ಎಲ್ಲಾ ಯೋಜನೆಗಳನ್ನು ಅನುಷ್ಠಾನ ಮಾಡಲು ಹಾಗೂ ಎಲ್ಲಾ ಖರೀದಿಗಳನ್ನು ಮಾಡಲು ಕೆಟಿಪಿಪಿ ಕಾಯ್ದೆಯನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಿಯಮಾನುಸಾರ ಟೆಂಡರ್ ಕರೆದು ಪಾರದರ್ಶಕವಾಗಿ ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು ಯೋಜನೆಗಳನ್ನು ಅನುಷ್ಠಾನ ಮಾಡಲಾಗಿರುತ್ತದೆ. ಆಯ್ಕೆಯಾದ ಸಂಸ್ಥೆಗಳು ಸಮರ್ಪಕವಾಗಿ ಹಾಗೂ ತೃಪ್ತಿಕರವಾಗಿ ಕೆಲಸ ನಿರ್ವಹಿಸಿರುವ ಬಗ್ಗೆ ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳಿಂದ ದೃಢೀಕರಣವನ್ನು ಪಡೆಯಲಾಗಿರುತ್ತದೆ. ಯೋಜನೆ ಅನುಷ್ಠಾನ ಮಾಡುವ ಸಂದರ್ಭದಲ್ಲಿ ಮೂರನೇ ವ್ಯಕ್ತಿ ತಪಾಸಣೆಗೆ ಒಳಪಡಿಸಿ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗಿರುತ್ತದೆ. ಸಂಸ್ಥೆಗಳು ಮಂಡಳಿಯ ಯೋಜನೆಗಳನ್ನು ಅನುಷ್ಠಾನ ಮಾಡುವ ಪೂರ್ವದಲ್ಲಿ ಮಂಡಳಿ ಸಭೆಯ ಅನುಮೋದನೆಯನ್ನು ಪಡೆದು ನಿಯಮಾನುಸಾರ ಹಾಗೂ ಅಗತ್ಯವಿದ್ದಲ್ಲಿ ಆರ್ಥಿಕ ಇಲಾಖೆಯ ಸಹಮತಿ ಹಾಗೂ ಸರ್ಕಾರದ ಮತ್ತು ಸಂಪುಟ ಸಭೆಯ ಅನುಮೋದನೆಯನ್ನು ಕೂಡ ಪಡೆಯಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಯಾವುದೇ ಅವ್ಯವಹಾರ ಅಥವಾ ಭ್ರಷ್ಟಚಾರ ನಡೆದಿರುವುದಿಲ್ಲ.

ಕಟ್ಟಡ ಕಾರ್ಮಿಕರಿಗೆ ಟೂಲ್‌ಕಿಟ್‌ಗಳನ್ನು ನೀಡಲು ಸರಬರಾಜು ಮಾಡಲು ಯಾವುದೇ ಐಟಿ ಕಂಪನಿಗೆ ನೇರವಾಗಿ ಕಾರ್ಯಾದೇಶವನ್ನು ನೀಡಿರುವುದಿಲ್ಲ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್‌ನಲ್ಲಿ ಕೇಳಿರುವ ಮಾನದಂಡಗಳನ್ನು ಪೂರೈಸಿದ ಹಾಗೂ ಅತೀ ಕಡಿಮೆ ದರವನ್ನು ನಮೂದಿಸಿರುವ ಅರ್ಹ ಸಂಸ್ಥೆಗಳನ್ನು ನಿಯಮಾನುಸಾರ ಆಯ್ಕೆ ಮಾಡಿಕೊಂಡು ಕಾರ್ಯಾದೇಶವನ್ನು ನೀಡಲಾಗಿದೆ.

• ಮಂಡಳಿ ವತಿಯಿಂದ ಇಲ್ಲಿಯವರೆಗೆ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ನೀಡಲಾಗಿರುವ ಒಟ್ಟು ಟೂಲ್ ಕಿಟ್ ಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| **ವೃತ್ತಿ** | **ನೋಂದಣಿಯಾದ ಫಲಾನುಭವಿಗಳ ಸಂಖ್ಯೆ** | **ವಿತರಿಸಿದ ಕಿಟ್ ಗಳ ಸಂಖ್ಯೆ** |
|---|---|---|
| ಮೇಸನ್ | 3,48,168 | 2,85,061 |
| ಬಾರ್ ಬೆಡಿಂಗ್ | 20,777 | 20,777 |
| ಕಾರ್ಪೆಂಟರಿ | 71,012 | 70,023 |
| ಎಲೆಕ್ಟ್ರೀಷಿಯನ್ | 85,826 | 80,679 |
| ಪೇಂಟಿಂಗ್ | 1,78,578 | 79,811 |
| ಪ್ಲಬಿಂಗ್ | 27,284 | 23,361 |
| ಟೈಲ್ ಲೇಯರ್ | 22,136 | 20,000 |
| ವೆಲ್ಡಿಂಗ್ | 22,039 | 16,000 |
| ರೋಡ್ ಕನ್ಸ್ಟ್ರಕ್ಷನ್ | 6,212 | 5,999 |
| **ಒಟ್ಟು** | **7,82,032** | **6,01,711** |

**ಕಾಇ 108 ಎಲ್ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**